# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ಧಾಪುರ ವಾರ್ಡ್–144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ನರಸಾರಾಮ್‌ರಾವ್ ಬಿ.ಎಲ್, ಮುಖ್ಯ ಅಭಿಯಂತರರು (ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:02/07/2022 ರಂದು ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಟಿ. ಮರಿಯಪ್ಪ ರಸ್ತೆಯಲ್ಲಿರುವ ವಾರ್ಡ್ ಕಛೇರಿ ಸಭಾಂಗಣದಲ್ಲಿ ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ನರಸಾರಾಮಾ ರಾವ್ ಬಿ.ಎಲ್. ಮುಖ್ಯ ಅಭಿಯಂತರರು (ದಕ್ಷಿಣ)
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–144.
3. ಶ್ರೀಮತಿ. ಸುರೇಖ ಆರ್. ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–144.
4. ಶ್ರೀ. ಎಂ.ಎಂ. ಬಾಬು ಕಂದಾಯ ಪರಿವೀಕ್ಷಕರು ವಾರ್ಡ್ –144.
5. ಶ್ರೀ. ಆರ್. ರಾಘವೇಂದ್ರ, ಬಿಲ್ ಕಲೆಕ್ಟರ್ ವಾರ್ಡ್–144.
6. ಶ್ರೀ. ಕೆ.ಎಲ್ ನಾಗರಾಜ ಸಹಾಯಕ ಅಭಿಯಂತರರು ಬೆಸ್ಕಾಂ.
7. ಶ್ರೀ. ಚೇತನ್ ಆರ್. ಕೆಲಸ ಪರಿವೀಕ್ಷಕರು, ಬೆಂ.ನೀ.ಸ. & ಒ. ಮಂಡಳಿ.
8. ಹಾಗೂ ಸಾರ್ವಜನಿಕರು.

*********

1. ಶ್ರೀ. ಸುರೇಶ್ ರವರು ಮಾತನಾಡಿ ದಯಾನಂದ ಸ್ಲಂನಲ್ಲಿ ಕಲುಷಿತ ನೀರು ಬರುತ್ತಿದ್ದು, ಇದರಿಂದ ಸ್ಥಳೀಯ ಸಾರ್ವಜನಿಕರಿಗೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹಿಂದಿನ ಎರಡು ಸಭೆಯಲ್ಲಿ ದೂರಿದರು. ಇದರನ್ವಯ BWSSBಯ ಸಹಾಯಕ ಅಭಿಯಂತರು ಮಾತನಾಡಿ ಸೋಮವಾರದ ಒಳಗಡೆ ಸಮಸ್ಯೆ ಬಗೆಹರಿಸಿಕೊಡುವುದಾಗಿ ಹಿಂದಿನಸಭೆಯಲ್ಲಿ ತಿಳಿಸಿದ್ದರು ಆದರೆ ಈ ತಹಲ್‌ವರೆವಿಗೂ ಕ್ರಮ ವಹಿಸಿರುವುದಿಲ್ಲವೆಂದು ಮತ್ತೊಮ್ಮೆ ಸಭೆಯಲ್ಲಿ ದೂರಿದರು. ಆದರೆ ಶ್ರೀಮತಿ. ಶ್ರೀಜಾ, ಸಹಾಯಕ ಅಭಿಯಂತರರು, ರವರು ಗೈರುಹಾಜರಾಗಿರುವ ಕಾರಣ ಶ್ರೀ. ಚೇತನ್ ಆರ್. ಕೆಲಸ ಪರಿವೀಕ್ಷಕರಿಗೆ ಈ ಸಂಬಂಧ ಕೂಡಲೇ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ತಿಳಿಸಿದರು.



Scanned with CamScanner

2. ಶ್ರೀ. ಸುರೇಶ್ ರವರು ಮಾತನಾಡಿ ಸದರಿ ವಾರ್ಡಿನ ಹೊಸೂರು ರಸ್ತೆಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕದ ಬಳಿ ಹಾಕಲಾದ ವಿದ್ಯುತ್ ಕಂಬಗಳ ದೀಪಗಳು ದುರಸ್ಥಿಯ ಬಗ್ಗೆ, ಮಳೆಗಾಲದಲ್ಲಿ ಟಿ. ಮರಿಯಪ್ಪ ರಸ್ತೆಯಲ್ಲಿ ನೀರು ನಿಂತು ಆಗುವ ಸಮಸ್ಯೆ ಮತ್ತು ಚರಂಡಿಗಳ ದುರಸ್ಥಿಯ ಬಗ್ಗೆ ಹಾಗೂ ಸೋಮೇಶ್ವರ ಮುಖ್ಯರಸ್ತೆಯಲ್ಲಿ ಕಟ್ಟಡ ನಿರ್ಮಿಸುತ್ತಿರುವ ಮಾಲೀಕರು ಹಾಕಿರುವ ತಾತ್ಕಾಲಿಕ ಶೆಡ್‌ನ್ನು ತೆರವುಗೊಳಿಸುವ ಬಗ್ಗೆ, ಗುಟ್ಟೇಪಾಳ್ಯ ಮುಖ್ಯರಸ್ತೆಯ ಕೊನೆಯಲ್ಲಿ ಮಳೆಗಾಲದಲ್ಲಿ ನೀರು ನಿಂತು ಸಾರ್ವಜನಿಕರಿಗೆ ಆಗುವ ತೊಂದರೆಯ ಬಗ್ಗೆ ಇತ್ಯಾದಿ ಸಮಸ್ಯೆಗಳ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಅಧ್ಯಕ್ಷರನ್ನು ಕೋರಿದರು. ಇದರನ್ವಯ ಸಂಬಂಧಪಟ್ಟ ಇಲಾಖೆಗೆ ಕ್ರಮ ವಹಿಸಲು ಸೂಚಿಸಲಾಗುವುದು ಎಂದು ಸಭೆಗೆ ತಿಳಿಸಿದರು.

3. ಶ್ರೀ. ಸುರೇಶ್, ಶ್ರೀ ಅಜ್ಮಲ್ ಮತ್ತು ಇತರರು ಮಾತನಾಡಿ ಗುಟ್ಟೇಪಾಳ್ಯ ರಸ್ತೆಯ ಎರಡೂ ಬದಿಯಲ್ಲಿ ಮಳೆನೀರು ಚರಂಡಿಯನ್ನು ಅಳವಡಿಸಲು ಹಿಂದಿನ ಸಭೆಯಲ್ಲಿ ಕೋರಿದ್ದರು. ಆದರೆ ಈ ಸಭೆಯಲ್ಲಿ ಕರ್ನಾಟಕ ಆಹಾರ ಸರಬರಾಜು ಇಲಾಖೆಯ ಡಿಪೋನಿಂದ 7ನೇ ಮುಖ್ಯರಸ್ತೆಯವರೆಗೆ ಆರ್.ಸಿ.ಸಿ ಚರಂಡಿ ನಿರ್ಮಿಸಲು ಕೋರಿದರು ಇದರನ್ವಯ ವಾರ್ಡಿನ ಸಹಾಯಕ ಅಭಿಯಂತರರು ಈಗಾಗಲೇ ಸಾಕಷ್ಟು ಬಾರಿ ರಸ್ತೆಯ ಎರಡೂ ಬದಿಯಲ್ಲಿ ಮಳೆನೀರು ಚರಂಡಿಯನ್ನು ಅಳವಡಿಸುವುದಾಗಿ ಸಾರ್ವಜನಿಕರಿಗೆ ಮನವರಿಕೆ ಮಾಡಿದ್ದರು. ಅದರಂತೆ ಕಾಮಗಾರಿಯ ಕಾರ್ಯಾದೇಶವು ಸಹ ಪಡೆಯಲಾಗಿರುತ್ತದೆ. ಆದರೆ ಸದರಿ ರಸ್ತೆಯ ಸಾರ್ವಜನಿಕರು ಈ ಕಾಮಗಾರಿಯನ್ನು ನಿರ್ವಹಿಸದಂತೆ ಮಾನ್ಯ ಚಿಕ್ಕಪೇಟೆ ಶಾಸಕರನ್ನು ಸ್ಥಳ ಪರಿಶೀಲನೆಗೆ ಕರೆದು ಕಾರ್ಯನಿರ್ವಹಿಸದಂತೆ ತಡೆ ಒಡ್ಡಿದ್ದ ಹಿನ್ನೆಲೆಯಲ್ಲಿ ಸದರಿ ರಸ್ತೆಯ ಸಾರ್ವಜನಿಕರು ಒಪ್ಪಿಗೆ ಪತ್ರವನ್ನು ಸಲ್ಲಿಸಿದ್ದಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳುವುದಾಗಿ ಅಧ್ಯಕ್ಷರು ಮತ್ತೊಮ್ಮೆ ಸಭೆಯಲ್ಲಿ ತಿಳಿಸಿದರು.

4. ಶ್ರೀ. ಸುರೇಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಅರುಣ್ ಸ್ಟುಡಿಯೋ ಹತ್ತಿರ ಬೆಳಗಿನ ಜಾವ ಸುಮಾರು 5.00 ಗಂಟೆಯಿಂದ 6.00 ಗಂಟೆಯವರೆಗೆ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕುಳಿತುಕೊಂಡು ಮದ್ಯಪಾನ ಮಾಡುತ್ತಿರುತ್ತಾರೆ ಇದರಿಂದ ಈ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಹಾಗೂ ಸ್ಥಳೀಯರಿಗೆ ತೊಂದರೆಯಾಗುತ್ತಿದೆ ಎಂದು ಹಿಂದಿನ ಸಭೆಯಲ್ಲಿ ದೂರಿದರು. ಇಂದಿನ ಸಭೆಯಲ್ಲಿಯೂ ಸಹ ಸಿದ್ಧಾಪುರ ಪೊಲೀಸ್ ಠಾಣೆಯ ಪೊಲೀಸರು ಗೈರು ಹಾಜರಾಗಿರುವುದರಿಂದ ಸದರಿ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

Scanned with CamScanner

5. ಶ್ರೀ. ಸುರೇಶ್ ರವರು ಮಾತನಾಡಿ ಪಾಲಿಕೆಯ ವತಿಯಿಂದ ಮಾರ್ಪಡಿಸಲಾದ ಬಯಲು ರಂಗಮಂದಿರವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಅಂದರೆ ಶುಭ ಸಮಾರಂಭ, ಮದುವೆ ಇತ್ಯಾದಿ ಕಾರ್ಯಕ್ರಮಗಳಿಗೆ ನೀಡುವಂತೆ ಹಿಂದಿನ ಸಭೆಯಲ್ಲಿ ಕೋರಿದರು. ಈ ಹಿನ್ನೆಲೆಯಲ್ಲಿ ಅಧ್ಯಕ್ಷರು ಸಭೆಯಲ್ಲಿ ಮಾತನಾಡಿ ಈ ವಿಷಯವಾಗಿ ಕಡತವನ್ನು ಮಂಡಿಸಲು ಮತ್ತೊಮ್ಮೆ ವಾರ್ಡಿನ ಅಭಿಯಂತರರಿಗೆ ಸೂಚನೆ ನೀಡಿದರು.

6. ಶ್ರೀ. ಸುರೇಶ್, ಶ್ರೀ. ಅಜ್ಮಲ್ ಮತ್ತು ಸಭೆಯಲ್ಲಿ ಹಾಜರಿದ್ದ ಸಾರ್ವಜನಕರು ಮಾತನಾಡಿ ಸಿದ್ದಾಪುರ ವಾರ್ಡಿನಲ್ಲಿ ಈಗಾಗಲೇ ಪ್ಯಾಕೇಜ್ ಅಡಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ದಿ ಕಾಮಗಾರಿ ಕೈಗೊಂಡಿರುವ ಗುತ್ತಿಗೆದಾರರು ರಸ್ತೆ ಡಾಂಬರೀಕರಣ ಮಾಡದೇ ಹಾಗೂ ಕಾಮಗಾರಿಯ ಪ್ರಗತಿಯ ಬಗ್ಗೆ ನಾವು ವಿಚಾರಿಸಿದಾಗ ನಿರ್ಲಕ್ಷದಿಂದ ಉತ್ತರ ನೀಡಿ ಕಾಮಗಾರಿಯನ್ನು ನಿರ್ವಹಿಸಿಸದೇ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದಾಗಿ ಹಿಂದಿನ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು. ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಹ ಸಾಕಷ್ಟು ಬಾರಿ ರಸ್ತೆ ಡಾಂಬರೀಕರಣ ಮಾಡಲು ಸೂಚಿಸಿದ್ದರೂ ಸಹ ತಹಲ್‌ವರೆವಿಗೆ ಕಾಮಗಾರಿ ಪ್ರಗತಿಯಾಗಿರುವುದಿಲ್ಲವೆಂದು ಹಾಗೂ ಡಾಂಬರೀಕರಣ ಮಾಡುವುದಾಗಿ ರಸ್ತೆಯನ್ನು ಸ್ವಚ್ಛಗೊಳಿಸಿ ಹಾಕಿರುವ ಡೆಬ್ರಿಸ್‌ನ್ನು ತೆರವುಗೊಳಿಸಿರುವುದಿಲ್ಲ ಎಂದು ಹಿಂದಿನ ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿದ್ದರ ಹಿನ್ನೆಲೆಯಲ್ಲಿ ಮೇಲಿನ ಎಲ್ಲಾ ವಿಚಾರವಾಗಿ ಕಡತವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ ಎಂದು ಸಹಾಯಕ ಅಭಿಯಂತರರು ಅಧ್ಯಕ್ಷರಿಗೆ ತಿಳಿಸಿದರು.

7. ಶ್ರೀ. ಕೆಂಪರಾಜು ರವರು ಮಾತನಾಡಿ ಸಿದ್ಧಾಪುರ ವಾರ್ಡಿನಲ್ಲಿ 18 ಜನ ಪೌರಕಾರ್ಮಿಕರು ಕಡಿಮೆ ಇದ್ದು, ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ದೂರಿದರು. ಹಾಗೂ ಪೌರಕಾರ್ಮಿಕರನ್ನು ನಿಯೋಜಿಸಿಕೊಂಡು ಸ್ವಚ್ಛತಾ ಕಾರ್ಯ ನಿರ್ವಹಿಸುವುದು ಸೂಕ್ತ ಎಂದು ಹಿಂದಿನ ಸಭೆಯಲ್ಲಿ ತಿಳಿಸಿದ್ದರ ಹಿನ್ನೆಲೆಯಲ್ಲಿ ಸಭೆಗೆ ಹಾಜರಿದ್ದ, ಶ್ರೀಮತಿ. ಸುರೇಖ ರವರು ಮಾತನಾಡಿ ಈಗಾಗಲೇ 4000 ಪೌರಕಾರ್ಮಿಕರನ್ನು ತೆಗೆದುಕೊಳ್ಳಲು ಪಾಲಿಕೆಯಿಂದ ಉದ್ದೇಶಿಸಲಾಗಿದೆ ಎಂದು ಹಾಗೂ ಅನುಮೋದನೆಗೊಂಡ ನಂತರ ಸದರಿ ವಾರ್ಡಿಗೆ ಹೆಚ್ಚಿನ ಪೌರಕಾರ್ಮಿಕರು ನಿಯೋಜನೆಗೊಳ್ಳುತ್ತಾರೆಂದು ಸಭೆಯಲ್ಲಿ ತಿಳಿಸಿದರು.

Scanned with CamScanner

8. ಶ್ರೀ. ಅಶೋಕ್ ರವರು ಮಾತನಾಡಿ ಬೃಹತ್ ಮಳೆನೀರುಗಾಲುವೆಯ ಒತ್ತುವರಿ ಹಾಗೂ ಯಾವುದೇ ನಡುಜಾಗ ಬಿಡದೆ ಬೃಹತ್ ನೀರುಗಾಲುವೆಗೆ ಹೊಂದಿಕೊಂಡಂತೆ ಮನೆಗಳನ್ನು ನಿರ್ಮಿಸಿರುವುದಾಗಿ ಹಿಂದಿನ ಸಭೆಯಲ್ಲಿ ದೂರು ನೀಡಿದರು. ಇದರನ್ವಯ ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಇಲಾಖೆಯವರನ್ನು ಸಭೆಗೆ ಕರೆದು ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹಿಂದಿನ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದ್ದರು. ಆದರೆ ಇಂದಿನ ಸಭೆಯಲ್ಲಿಯೂ ಸಹ ಬೃಹತ್ ಮಳೆನೀರುಗಾಲುವೆ ಇಲಾಖೆಯವರು ಗೈರುಹಾಜರಾಗಿದ್ದು, ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

9. ಶ್ರೀ. ಅಶೋಕ್ ರವರು ಮಾತನಾಡಿ ಶ್ರೀ ಪಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗ ಹಾಗೂ ಶ್ರೀ ಎಲ್ಲಮ್ಮ ದೇವಸ್ಥಾನ ನಿರ್ಮಿಸಿರುವ ಜಾಗದ ಬಗ್ಗೆ ವಿವರಣೆಯನ್ನು ನೀಡುವಂತೆ ದೂರು ನೀಡಿದರು. ಇದರನ್ವಯ ಸಭೆಯಲ್ಲಿ ಹಾಜರಿದ್ದ ಶ್ರೀ. ಎಂ.ಎಂ. ಬಾಬು ಕಂದಾಯ ಪರಿವೀಕ್ಷಕರು ರವರಿಗೆ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು.

10. ಶ್ರೀ. ಸುಮಂತ್ ರವರು ಮಾತನಾಡಿ ಮಾತನಾಡಿ ಸಿದ್ಧಾಪುರದ ಪೂಜಮ್ಮ ದೇವಸ್ಥಾನದ ಹತ್ತಿರ ಹಾದುಹೋಗುವ ರಸ್ತೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರಿನ ಮತ್ತು ಒಳಚರಂಡಿಯ ಕೊಳವೆಗಳನ್ನು ಅಳವಡಿಸಲು ಸಾಕಷ್ಟು ಬಾರಿ ಮನವಿಯನ್ನು ಸಲ್ಲಿಸಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲದಿರುವ ಕಾರಣ ಸದರಿ ದುರಸ್ಥಿಗೊಂಡಿರುವ ಕಾಂಕ್ರೀಟ್ ರಸ್ತೆಯನ್ನು ತೆಗೆದು ಹಾಕಿ ಹೊಸದಾಗಿ ರಸ್ತೆ ನಿರ್ಮಿಸಿಕೊಡಲು ಹಿಂದಿನ ಸಭೆಗಳಲ್ಲಿ ಕೋರಿದ್ದರು. ಈ ವಿಚಾರವಾಗಿ ಚರ್ಚಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಅಭಿಯಂತರರು ಗೈರು ಹಾಜರಾಗಿರುವುದರಿಂದ ಮುಂದಿನ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.

11. ಶ್ರೀ. ಸುಮಂತ್ ರವರು ಮಾತನಾಡಿ ಸಿದ್ಧಾಪುರದ ಸೋಮೇಶ್ವರ ದೇವಸ್ಥಾನಕ್ಕೆ ಹೊಂದಿಕೊಂಡಿರುವ ರಸ್ತೆಗಳಲ್ಲಿ ಆರ್.ಸಿ.ಸಿ ಚರಂಡಿಗಳನ್ನು ಹಾಗೂ ಬೋರ್‌ವೆಲ್‌ಗಳನ್ನು ಸರಿಪಡಿಸಲು ಹಿಂದಿನ ಸಭೆಯಲ್ಲಿ ಕೋರಿದ್ದರು. ಈ ಹಿನ್ನೆಲೆಯಲ್ಲಿ ವಾರ್ಡಿನ ಅಭಿಯಂತರರು ಮಾತನಾಡಿ ಕಾಮಗಾರಿಗಳನ್ನು ಪ್ರಾರಂಭಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

12. ಶ್ರೀ. ಅಜ್ಮಲ್ ರವರು ಮಾತನಾಡಿ ಸೋಮೇಶ್ವರನಗರದ ಕಮಾನಿನ ಹತ್ತಿರ ಹೈಮಾಸ್ಕ್ ಕಂಬನ್ನು ಅಳವಡಿಸಲು ಮತ್ತು ಸದರಿ ವಾರ್ಡಿನಲ್ಲಿರುವ ಬಂಡೆಪಾರ್ಕ್ ಮತ್ತು ಪ್ರಿಯದರ್ಶಿನಿ ಪಾರ್ಕ್‌ನ್ನು ತೋಟಗಾರಿಕೆ ಇಲಾಖೆಯಿಂದ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲು ತಿಳಿಸಿದರು. ಇದರನ್ವಯ ದೂರವಾಣಿಯ ಮುಖಾಂತರ ತೋಟಗಾರಿಗೆ ಇಲಾಖೆಯ ಮುಖ್ಯಸ್ಥರಾದ ಶ್ರೀ. ನಿರಂಜನ್ ರವರಿಗೆ ಅಧ್ಯಕ್ಷರು ಕರೆ ಮಾಡಿ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೂಡಲೇ ಕ್ರಮ ವಹಿಸಲು ಸಭೆಯಲ್ಲಿ ತಿಳಿಸಿದರು.

13. ಶ್ರೀ. ಜಯರಾಂ ಎಂ.ಜಿ ರವರು ಮಾತನಾಡಿ ವಾರ್ಡ್ ಹತ್ತಿರವಿರುವ ಬಯಲು ರಂಗ ಮಂದಿರದ ಮುಂಭಾಗದಲ್ಲಿರುವ ಖಾಲಿ ಜಾಗದಲ್ಲಿ ಮಕ್ಕಳನ್ನು ಆಟವಾಡಲು ಅವಕಾಶ ಕಲ್ಪಿಸುವ ಬಗ್ಗೆ, ಟಿ. ಮರಿಯಪ್ಪ ರಸ್ತೆ ಮತ್ತು ಗುಟ್ಟೇಪಾಳ್ಯ ರಸ್ತೆಗಳಲ್ಲಿ ರಸ್ತೆ ಹುಬ್ಬುಗಳನ್ನು ಅಳವಡಿಸುವ ಬಗ್ಗೆ, ಗುಟ್ಟೇಪಾಳ್ಯದ ಹತ್ತಿರ ಇರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಬೆಸ್ಕಾಂ ಇಲಾಖೆಯವರಿಗೆ ಪ್ರತ್ಯೇಕಿಸಿ ಅಳವಡಿಸುವ ಬಗ್ಗೆ, 4ನೇ ಅಡ್ಡರಸ್ತೆ ಕೆ.ಎಂ. ಕಾಲೋನಿಯಲ್ಲಿ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಬಗ್ಗೆ ಹಾಗೂ ಸಿದ್ಧಾಪುರ ಸರ್ಕಾರಿ ಶಾಲೆಯ ಗೋಡೆಯ ಹೊರಗಿನ ಭಾಗದಲ್ಲಿ ಪಾಚಿ ಕಟ್ಟಿದ್ದು ಅದನ್ನು ಸರಿಪಡಿಸಲು ಕೋರಿದರು. ಇದರನ್ವಯ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

AE 2/07/2022
ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

02/07
ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner